ದಿನಾಂಕಃ 09-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ 1 ರವರ ಪರ ವಕೀಲರಾದ ಶ್ರೀ. ಎಸ್ ಆರ್ ಬಿ ವಕೀಲರಿಂದ

ನಿಮ್ಮ ತಂದೆ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ 1936 ರಲ್ಲಿ. ನಿಮ್ಮ ತಂದೆ ತೀರಿಕೊಳ್ಳುವಾಗ ಯಾರ ಜೊತೆ ಇದ್ದರು ಎಂದರೆ ನನ್ನ ಜೊತೆಯಲ್ಲಿ ಇದ್ದರು. ನನಗೆ ಮದುವೆಯಾದಾಗಿ ಮಕ್ಕಳಾದಾಗಿನಿಂದ ನನ್ನ ಜೊತೆ ನನ್ನ ತಂದೆ ಇರುತ್ತಾರೆ ನಿಮ್ಮ ತಂದೆ ಚಿಂತಾಮಣಿಯಲ್ಲಿ ಯಾವಾಗಲೂ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ, ಚಿಂತಾಮಣಿಯಲ್ಲಿ ಮನೆ ಕಟ್ಟಿರುವುದು. ನಿಮ್ಮ ತಂದೆ ಚಿಂತಾಮಣಿಯಲ್ಲಿ ವಾಸ ಇದ್ದರು ಎನ್ನುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಇರುವುದಿಲ್ಲ. ದಾವಾ ಆಸ್ತಿ ನಿಮ್ಮ ತಂದೆಗೆ ಹೇಗೆ ಬಂತು ಎಂದರೆ ನನ್ನ ತಂದೆ ಶಾಲೆಯಲ್ಲಿ ಗುಮಾಸ್ತನಾಗಿದ್ದು ದಾವಾ ಸ್ವತ್ತನ್ನು ನನ್ನ ತಂದೆಗೆ ಕೊಟ್ಟಿರುತ್ತಾರೆ. ಅಮೀರ್ ಜಾನ್ ಎನ್ನುವವರಿಂದ ದಾವಾ ಸ್ವತ್ತು ನನ್ನ ತಂದೆಗೆ ಬಂದಿರುತ್ತದೆ. ಅಮೀರ್ ಜಾನ್ ರವರಿಂದ ನಿಮ್ಮ ತಂದೆಗೆ ಆಸ್ತಿ ಬಂದಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ದಾಖಲೆ ಇರುವುದಿಲ್ಲ ಯಾವುದೇ ಪೇಪರ್ ನಲ್ಲಿ ಬರೆದುಕೊಟ್ಟಿರುವುದಿಲ್ಲ. ದಾವಾ ಆಸ್ತಿ ಅಮೀರ್ ಜಾನ್ ರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಇರುವುದಿಲ್ಲ. ದಾವಾ ಆಸ್ತಿಗೂ ನಿಮ್ಮ ತಂದೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ-7 ರಿಂದ ನಿಪಿ-9 ರಲ್ಲಿ ಇರುವ ಶೇಕ್ ಅಹಮದ್ ಅಲಿಯಾಸ್ ಬಾಷಾ ಸಾಬ್ ರವರು ನಿಮ್ಮ ತಂದೆ ಅಲ್ಲ ಎಂದರೆ ಸರಿಯಲ್ಲ.

ವೆಂಕಟಗಿರಿಕೋಟೆಯಲ್ಲಿ ಅನ್ವರ್ ಎನ್ನುವವರು ಕೌನ್ಸಿಲರ್ ಎಂಬುವವರು ಇರುತ್ತಾರೆ ಗೊತ್ತ ಎಂದರೆ ಗೊತ್ತು. ಅವರೇ ಎಲ್ಲಾ ಮಾಡಿರುವುದು. ಅಬ್ದುಲ್ ಬಷೀರ್ ಅನ್ವರ್ ರವರ ಅಣ್ಣ ಎಂದರೆ ಸರಿ. ಅಬ್ದುಲ್ ಬಷೀರ್ ಮತ್ತು ಬಾಷಾ ಸಾಬ್ ಎನ್ನುವವರು ಅವರಿಗೆ ಪರಿಚಯಸ್ಥರು ಎಂದರೆ ನಾವೆಲ್ಲರೂ ಒಂದೇ ಕಡೆ ಇರುತ್ತೇವೆ. ಶೇಕ್ ಅಹಮದ್ ಅಲಿಯಾಸ್ ಬಾಷಾಸಾಬಿ ರವರು 2011 ರಲ್ಲಿ ಚಿಂತಾಮಣಿಯಲ್ಲಿ

ವಾಸ ಇರುತ್ತಾರೆ ಎಂದರೆ ತೀರಿಕೊಂಡಿರುತ್ತಾರೆ. ವೆಂಕಟಗಿರಿಕೋಟೆಯಲ್ಲಿ ವಾಸ ಇರುವ ಶೇಕ್ ಅಹಮದ್ ರವರಿಗೆ ಸೇರಿದ ಆಸ್ತಿ ಎಂದರೆ ನಮ್ಮ ತಂದೆಗೆ ಸೇರಿದ ಆಸ್ತಿ ಎಂದು ನುಡಿಯುತ್ತಾರೆ. ವೆಂಕಟಗಿರಿಕೋಟೆ ಯಲ್ಲಿ ಇರುವ ಶೇಕ್ ಅಹಮದ್ ರವರು ಬೀಬೀಜಾನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ- 2 ಕ್ರಯ ಪತ್ರದಲ್ಲಿ ಇರುವ ಶೇಕ್ ಅಹಮದ್ ನಿಮ್ಮ ತಂದೆ ಅಲ್ಲ ಎಂದರೆ ಸರಿಯಲ್ಲ ಬೀಬೀಜಾನ್ ಖರೀದಿ ಮಾಡಿದಾಗಿನಿಂದ ಸ್ವಾಧೀನ ಇರುತ್ತಾರೆ ಎಂದರೆ ಇಲ್ಲ ಬೇರೆಯವರು ಇರುತ್ತಾರೆ. ಯಾರು ಇರುವುದು ಎಂದರೆ ಯಾರು ಇರುತ್ತಾರೆ ಎಂದು ಗೊತ್ತಿರುವುದಿಲ್ಲ. ಅವರು ಬಾಡಿಗೆಗೆ ಇರುತ್ತಾರೆ ಅವರ ಹೆಸರು ಗೊತ್ತಿರುವುದಿಲ್ಲ. ಬೀಬಿಜಾನ್ ರವರು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಅವರು ಬಾಡಿಗೆಗೆ ಕೊಟ್ಟಿರುತ್ತಾರೋ ಲೀಜ್ ಗೆ ಕೊಟ್ಟಿರುತ್ತಾರೋ ಗೊತ್ತಿರುವುದಿಲ್ಲ. ಈಗ ಸ್ವಾಧೀನದಲ್ಲಿ ಇರುವವರ ಹೆಸರು ಊರು ನಿಮಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ ನಾನು ಹೋಗಿ ಕೇಳಿದಾಗ ಗಲಾಟೆ ಮಾಡಿರುತ್ತಾರೆ. ನಿಮ್ಮ ತಂದೆ ತೀರಿಕೊಂಡ ನಂತರ ಎಷ್ಟು ವರ್ಷಕ್ಕೆ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ 5-6 ವರ್ಷಗಳ ನಂತರ ಹೋಗಿರುತ್ತೇನೆ. ನೀವು 5-6 ವರ್ಷಗಳ ನಂತರ ಹೋದಾಗ ಅದರಲ್ಲಿ ಬೇರೆಯವರು ಸ್ವಾಧೀನ ಇರುತ್ತಾರೆ ಎಂದರೆ ಇರುತ್ತಾರೆ. ನೀವು ಹೋದಾಗ ಏನಂತ ಗಲಾಟೆ ಮಾಡಿರುತ್ತಾರೆ ಎಂದರೆ ನನಗೆ ಸಂಬಂಧ ಇರುವುದಿಲ್ಲ ನಿಮ್ಮ ತಂದೆ ಮಾಡಿಕೊಟ್ಟಿರುತ್ತಾರೆ ಅಂತ ಗಲಾಟೆ ಮಾಡಿರುತ್ತಾರೆ. ದಿಃ 07-06-1986 ರಲ್ಲಿ ನಿಮ್ಮ ತಂದೆ ತೀರಿಕೊಂಡಿರುತ್ತಾರೆ ಎಂದರೆ ಹೌದು. ನಿಮ್ಮ ತಂದೆ 1986 ರಲ್ಲಿ ಸತ್ತಿದ್ದು ನೀವು ಆ ಜಾಗಕ್ಕೆ 1991 ರಲ್ಲಿ ಹೋಗಿರುತ್ತೀರಾ ಎಂದರೆ ನನ್ನ ತಂದೆ 5 ವರ್ಷಗಳಿಗೆ ನಾನು ಹೋಗಿರುತ್ತೇನೆ. ನಿಮ್ಮ ತಂದೆ ತೀರಿಕೊಂಡ 5 ವರ್ಷಕ್ಕೆ ನಿಮಗೆ ಬೇರೆಯವರು ಸ್ವಾಧೀನ ಇರುವುದು ಗೊತ್ತಾಗಿರುತ್ತದೆ ಅದರ ಬಗ್ಗೆ ಕೇಸು ದಾಖಲಿಸಿರುತ್ತೀರಾ ಎಂದರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ದೂರು ದಾಖಲಿಸಿದಾಗ ಪೋಲಿಸರು ಪ್ರತಿವಾದಿ 1 ಬೀಬೀ ಜಾನ್ ರವರನ್ನು ಕರೆಸಿರುತ್ತಾರೆ. ಪೋಲಿಸರಿಗೆ ಅವರು ನಿಮ್ಮನ್ನು ನೋಡೇ ಇರುವುದಿಲ್ಲ ನಿನಗೆ ಸಂಬಂಧ ಇರುವುದಿಲ್ಲ ಅಂತ ಹೇಳಿರುತ್ತಾರೆ. ದಾವಾ ಆಸ್ತಿಗೂ ನಿಮಗೂ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.